'ಹೋಗು, ಆ ಮಸ್ತಾನ್ ಸಾಬಿ ಮನೆಗೋಗಿ ಅವನ್ನ ಜತೆಲೇ ಕರಕಂಡ್ ಬಾ...' ಎಂದರು. ಚೇರ್ಮನ್ನರು ಹಾಗೆ ಹೇಳುವಾಗ ರಾಜಣ್ಣ ಇನ್ನೂ ಹಜಾರದಲ್ಲೇ ಕೂತಿದ್ದ. ಪಿಡಿಒ ಗೇಟಿನ ಹೊರಗೆ ನಿಂತು ಯಾರ ಜತೆಗೊ ಫೋನಿನಲ್ಲಿ ಮಾತಾಡುತ್ತಿದ್ದದನ್ನು ನೋಡಿದ. ಅವರು ಹೆಣಗಳ ವಿಷಯ ಮಾತಾಡ್ತಿರಬೌದು ಅನ್ನಿಸಿತು. ಊಟದ ತಟ್ಟೆ ಮೇಲೆ ಇನ್ನೊಂದು ತಟ್ಟೆಯನ್ನು ಗುಬರಾಕಿ ಕೈತೊಳೆದು ಮಸ್ತಾನ್ ಮನೆ ಕಡೆಗೆ ಹೋದ.

'ತುಂಬಿದ ಕೆರೆಯಲ್ಲಿ ಈಜೋ ಧೈರ್ಯವಂತರು ನಮ್ಮೂರಲ್ಲಿ ಯಾರೂ ಇಲ್ಲ. ನಾವು ಸಣ್ಣವರಿದ್ದಾಗ ಊರತುಂಬಾ ಬಾವಿಗಳಿದ್ದವು. ಬೇಸಿಗೆ ಬಂತೆಂದರೆ ಊರ ಹುಡುಗರು, ಹುಡುಗೀರೆಲ್ಲ ಈಜುಬುರುಡೆ ಕಟ್ಟಿಕೊಂಡು ನೀರಿಗೆ ಬೀಳೋದೇನು. ಮೇಲಿಂದ ಧುಮುಕದೇನು... ಎಲ್ಲರಿಗೂ ಈಜು ಬರ್ತಿತ್ತು. ಈ ಬೋರು ಬಾವಿಗಳು ಬಂದೇ ಬಂದ್ವು... ದೊಡ್ಡ ಬಾವಿಗಳೆಲ್ಲ ಒಣಗಿದ್ವು. ಈಗ ಈಜಬೇಕು ಅಂತ ಆಸೆಯಾದ್ರೂ ಈ ಬಾವಿಗಳಲ್ಲಿ ನೀರೇ ಇಲ್ಲ.

ಮಸ್ತಾನ್ ಇದಾನಲ್ಲ, ಈಜೋದರಲ್ಲಿ ಅವನು ನಂಬರ್ ಒನ್. ತುಂಬಿದ ಕೆರೆಯಲ್ಲಿ ಈಜೊ ಧೈರ್ಯ ಇರೋದು ಅವನಿಗೆ ಮಾತ್ರ. ಅವನು ಐದು ಸಾವಿರ ಕೇಳಿದ್ರೂ ಕೊಡ್ತೀನಿ. ಯಾರಿಗೂ ಗೊತ್ತಾಗದಂಗೆ ಅವನ್ನ ಕೆರೆಗೆ ಇಳಿಸಿ ಹೆಣಗಳನ್ನು ನೀರಿಂದ ಹೊರಕ್ಕೆ ಎಳೆಸಿ ಹಾಕಿಸ್ತೀನಿ' ಅಂತ ಚೇರ್ಮನ್ನರು ಬಾಯಿ ಬಿಟ್ಟು ಹೇಳಿದರು.

'ದೇವರ ಕೆರೆಯಲ್ಲಿ ಯಾರೂ ಈಜಂಗಿಲ್ಲ, ಅನ್ಯ ಧರ್ಮದೋರು ಕೆರೆಯೊಳಕ್ಕೆ ಇಳಿಯುವಂಗೂ ಇಲ್ಲ. ಬಟ್ಟೆಬರೆ ಒಗೆಯಂಗಿಲ್ಲ ಅಂತ ಪಂಚಾಯ್ತಿ ಠರಾವು ಇದೆಯಲ್ಲ... ಮಸ್ತಾನ್ ಕೆರೆಯೊಳಕ್ಕೆ ಇಳಿದಿದ್ದ ಅನ್ನೋದು ಗೊತ್ತಾದ್ರೆ ಜನ ಸುಮ್ಮನಿರ್ತಾರ' ಅಂತ ರಾಜಣ್ಣ ಅಡ್ಡ ಮಾತಾಡಿದ. 'ಅದನ್ನ ಆಮೇಲೆ ವಿಚಾರ ಮಾಡನ' ಅಂತ ಚೇರ್ಮನ್ನರು ಹೇಳುತ್ತಿರುವಾಗಲೇ ಪಿಡಿಒ ಬಂದ.

'ಈಗ ನೀವಿಬ್ಬರೂ ಒಂದ್ ಕೆಲ್ಸ ಮಾಡಬೇಕು. ಕೆರೆ ಹತ್ರಕ್ಕೋಗಿ ಹೆಣಗಳು ಬಿದ್ದಿರೋದು ನಿಜವೋ ಅಲ್ಲವೋ ಅಂತ ಕಣ್ಣಾರೆ ನೋಡಿ ಬರಬೇಕು. ನಮ್ಮ ಜೀಪು ತಗಂಡೇ ಹೋಗ್ರಿ' ಎನ್ನುತ್ತ ಬಾಗಿಲ ಚೌಕಟ್ಟಿಗೆ ನೇತು ಹಾಕಿದ್ದ ಜೀಪಿನ ಬೀಗವನ್ನು ಪಿಡಿಒಗೆ ಕೊಟ್ಟರು. ಜೀಪು ಓಡಿಸೋದು ಅಂದರೆ ಅವನಿಗೆ ಎಲ್ಲಿಲ್ಲದ ಖುಷಿ. 'ಸರಿ' ಎನ್ನುತ್ತ ಅವನು ಹೊರಟು ನಿಂತ.

ಇಬ್ಬರೂ ಕೆರೆ ಹತ್ರ ಹೋಗಿ ಬರೋದರೊಳಗೆ ಮಸ್ತಾನನಿಗೆ ವಿಷಯ ತಿಳಿಸಬೇಕು. ಕೆರೆಯೊಳಕ್ಕೆ ಇಳಿಸಲು ಅವನನ್ನು ಒಪ್ಪಿಸಬೇಕು ಅಂತ ನಿರ್ಧರಿಸಿ ಅವನಿಗೆ ಕಾಯುತ್ತ ಕೂತರು.

ಅರ್ಧಗಂಟೆ ಕಳೆದ ಮೇಲೆ ತಿಮ್ಮರಾಯಿ ಒಬ್ಬನೇ ಬಂದ. ಬಂದವನು, 'ನಾನು ಹೋದಾಗ ಮಸ್ತಾನ್ ಅಂಗಳದಲ್ಲಿ ಕೂತು ಮೀನು ಉಜ್ತಿದ್ದ. ಅವನ ಮಗಳು, ಅಳಿಯ ಬಂದಿರೊ ಹಂಗದೆ. ಇವತ್ತು ನಮ್ಮನೇಲಿ ಮೀನು ಸಾರು. ಊಟ ಆಗೋವರಗೂ ನಾನೆಲ್ಲಿಗೂ ಬರಲ್ಲ. ಇಷ್ಟು ದಿನ ನಾನು ಬದುಕಿದೀನೊ, ಸತ್ತಿದೀನೊ ಅಂತ ಕೇಳದ ನಿಮ್ಮ ಚೇರ್ಮನ್ನರಿಗೆ ಈಗ ನನ್ನತ್ರ ಏನ್ ಕೆಲಸ ಐತಂತೊ? ಹೋಗು ಅದೇನು ಅನ್ತ ಕೇಳಿಕಂಡ್ ಬಂದು ನಂಗೇಳು. ಆಮೇಲೆ ಬರೋದೊ, ಬಿಡೋದೊ ಯೋಚ್ನೆ ಮಾಡಿ ಹೇಳ್ತೀನಿ...' ಅಂತ ಅಂದ.

'ವಿಷ್ಯ ಏನು ಅಂಬದು ನಂಗೊತ್ತಿಲ್ಲ... ನಿನ್ನತ್ರಲೇ ಮಾತಾಡಬೇಕಂತೆ. ಅರ್ಜೆಂಟು ಅಂತಂದ್ರು ಅಂತಲೂ ಹೇಳ್ದೆ. ಅದಕ್ಕವನು, ನಂಗೆ ಮೈಕೈ ನೋವು. ಜ್ವರ ಬರಂಗಿದೆ ಅಂತ ಹೇಳೋಗು ಅಂತ ತಾಚ್ಛಾರದಲ್ಲಿ ಮಾತಾಡಿದ' ಅಂತ ಮಸ್ತಾನ್ ಜತೆ ನಡೆದ ಮಾತುಕತೆಯ ವಿವರಗಳನ್ನೆಲ್ಲ ಒಂದಕ್ಷರವೂ ಬಿಡದೆ ಚೇರ್ಮನ್ನರಿಗೆ ಒಪ್ಪಿಸಿದ.

'ಮಗನಿಗೆ ಪೊಲೀಸ್ ಕೆಲಸ ಸಿಕ್ಕ ಮೇಲೆ ಅವನ ನಖ್ರ ಜಾಸ್ತಿಯಾಗಿದೆ' ಅಂತ ಊರ ಜನ ಹೇಳುತ್ತಿದ್ದುದು ಚೇರ್ಮನ್ನರ ಕಿವಿ ಮೇಲೆ ಬಿದ್ದಿತ್ತು. ಜನ ತಮಾಷೆಗೆ ಹೇಳುತ್ತಿರಬಹುದು ಅಂತ